# ಯುವಸ್ಪಂದನ

## ನಮ್ಮ ಪ್ರಶ್ನೆಗಳಿಗೆ ನಿಮ್ಮ ಉತ್ತರ

### ಆದರ್ಶ ವಿದ್ಯಾರ್ಥಿ ಯಾರು ?

# ಯುವವೇದಿಕೆ

**"ವಿದ್ಯಾ ದದಾತಿ ವಿನಯಂ"** ವಿದ್ಯೆಗೆ ತಕ್ಕಂತೆ ವಿನಯ, ಶಿಸ್ತು, ಸಂಯಮ, ನೀತಿ, ಏಕಾಗ್ರತೆ ಮತ್ತು ಗುರುಹಿರಿಯರಲ್ಲಿ ಗೌರವ ಹಾಗೂ ಕಿರಿಯರಲ್ಲಿ ಉತ್ತಮ ಬಾಂಧವ್ಯ ಇವು ಆದರ್ಶ ವಿದ್ಯಾರ್ಥಿಯಲ್ಲಿರಬೇಕು. ದೇಶದ ಜನತೆಯಲ್ಲಿ ಪ್ರೀತಿ, ವಿಶ್ವಾಸವಿರಬೇಕು. ವ್ಯಾವಹಾರಿಕ ಜ್ಞಾನವನ್ನು ಬೆಳೆಸಿಕೊಂಡು ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ನಡವಳಿಕೆಯನ್ನು ಮೈಗೂಡಿಸಿ ಕೊಳ್ಳಬೇಕು. ವಿದ್ಯಾರ್ಥಿಯು ಯಾವುದೇ ವಿದ್ಯೆಯನ್ನಾದರೂ ಶ್ರದ್ಧೆಯಿಂದ ಅಭ್ಯಸಿಸಿ, ಚಿಂತನೆ ಮಾಡಿ, ಮನನ ಮಾಡಿ ಆ ವಿದ್ಯೆಯ ಶ್ರೇಷ್ಠತೆಯನ್ನು ಮೈಗೂಡಿಸಿಕೊಂಡು ಆ ವಿದ್ಯೆಯಿಂದ ತನಗೂ, ಸಮಾಜಕ್ಕೂ ಒಳ್ಳೆಯದಾಗುವ ರೀತಿಯಲ್ಲಿ ನಡೆದುಕೊಳ್ಳಬೇಕು. ಸಮಾಜಸೇವೆಯಲ್ಲಿ ತೊಡಗಿ, ಧಾರ್ಮಿಕ, ಆಧ್ಯಾತ್ಮಿಕ ಶಿಕ್ಷಣ ಪಡೆದಿರಬೇಕು. ಜಾತಿ-ಭೇದವನ್ನು ಮಾಡದೆ, ಬಡವರ ಬಗ್ಗೆ ಕರುಣೆ, ದಯೆ, ದಾಕ್ಷಿಣ್ಯ ತೋರಬೇಕು. ನಿಸ್ವಾರ್ಥಿಯಾಗಿರಬೇಕು. ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು. ಜೀವನದಲ್ಲಿ ಒಂದು ಗುರಿ ಯಿಟ್ಟುಕೊಂಡು ಅದನ್ನು ಸಾಧಿಸುವಂತಹ ಛಲವನ್ನು ಹೊಂದಿದವನೆ ಆದರ್ಶ ವಿದ್ಯಾರ್ಥಿ. ಎಷ್ಟೇ ಕಷ್ಟ ಬಂದರೂ ಎದೆಗುಂದದವನೇ ಆದರ್ಶ ವಿದ್ಯಾರ್ಥಿ. **—ಜೆ.ಎಸ್. ನಾಗಲಕ್ಷ್ಮಿ, ದ್ವಿತೀಯ ಬಿ. ಎಸ್ಸಿ., ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

**ಆದರ್ಶ** ವಿದ್ಯಾರ್ಥಿ ಯಾರೆಂದು ನಿರ್ದಿಷ್ಟವಾಗಿ ಹೇಳಲು ಅನೇಕ ದೃಷ್ಟಿಕೋನಗಳಿಂದ ಆತನ ವ್ಯಕ್ತಿತ್ವವನ್ನು ಅಳೆಯಬೇಕಾಗುತ್ತದೆ. ಕೇವಲ ಪಠ್ಯ ವಸ್ತುಗಳಲ್ಲಿ ಜಾಣನಾಗಿ ರ‍್ಯಾಂಕ್ ಪಡೆಯುವವನನ್ನು ಆದರ್ಶ ವಿದ್ಯಾರ್ಥಿ ಎನ್ನಲು ಸಾಧ್ಯವಿಲ್ಲ ಅಥವಾ ಓದಿನಲ್ಲಿ ಹಿಂದೆ ಬಿದ್ದು ಆಟೋಟಗಳಲ್ಲಿ ಮುಂದೆ ಇದ್ದರೂ ಆತನನ್ನು ಆದರ್ಶ ವಿದ್ಯಾರ್ಥಿ ಎನ್ನಲು ಸಾಧ್ಯವಿಲ್ಲ, ಅಥವಾ ಓದು, ಆಟ ಎರಡರಲ್ಲೂ ಮುಂದೆ ಇದ್ದು ಸಾಮಾಜಿಕ ಪ್ರಜ್ಞೆ ಇಲ್ಲದಿದ್ದರೆ ಆತನನ್ನು ಆದರ್ಶ ವಿದ್ಯಾರ್ಥಿ ಎನ್ನಲು ಸಾಧ್ಯವಿಲ್ಲ.

> ಯಾರು ಅತ್ಯಧಿಕವಾಗಿ ಪುಸ್ತಕಗಳನ್ನು ಅವಲಂಬಿಸುತ್ತಾರೊ ಅವರು ಅತ್ಯುತ್ತಮ ವಿದ್ಯಾರ್ಥಿಗಳಲ್ಲ. ನಾವು ಪುಸ್ತಕಗಳಿಂದ ಪಡೆಯುವುದೇನಿದ್ದರೂ ವಿಷಯಗಳನ್ನುಅಷ್ಟೆ. ಆದರೆ ವ್ಯಕ್ತಿಯು ತನ್ನ ಮನೆಯನ್ನು ತಾನೇ ಕಟ್ಟಬೇಕು.
>
> **—ಜಿ.ಮ್ಯಾಕ್‌ಡೊನಾಲ್ಡ್**
> (G.Macdonald)

ಆದರ್ಶ ವಿದ್ಯಾರ್ಥಿ ಎನಿಸಿಕೊಳ್ಳಲು ತಂದೆತಾಯಿಗಳಿಗೆ **ಉತ್ತಮ ಪುತ್ರನಾಗಿರಬೇಕು, ಗುರುಹಿರಿಯರಿಗೆ ವಿಧೇಯನಾದ ಶಿಷ್ಯನಾಗಿರಬೇಕು, ಸಹಪಾಠಿಗಳಿಗೆ ಸ್ನೇಹಿತ, ಭ್ರಾತೃ ಹಾಗೂ ಮಾರ್ಗದರ್ಶಿಯಾಗಿರಬೇಕು, ಪರಸ್ತ್ರೀಯರನ್ನು ತಾಯಿ ಅಥವಾ ಸೋದರಿ ಭಾವನೆಯಿಂದ ನೋಡುವಂಥ ಗುಣವುಳ್ಳವನಾಗಿರಬೇಕು, ದೇಶಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧನಾಗಿರುವಂಥ ತ್ಯಾಗಿಯಾಗಿರಬೇಕು,** ತನ್ನ ಸ್ವಾರ್ಥಕ್ಕಾಗಿ ಇತರರ ಅಥವಾ ಪರರ ಆಸ್ತಿ, ಹಣ, ದೇಶವನ್ನು ದುರ್ಬಳಕೆ ಮಾಡಿಕೊಳ್ಳಬಾರದು. ಇಂತಹ ಹಲವು ಹತ್ತಾರು ಸದ್ಗುಣಗಳನ್ನು ಬೆಳೆಸಿಕೊಂಡಿರುವ "ಆದರ್ಶವಿದ್ಯಾರ್ಥಿ"ಯನ್ನು ದೇವರೂ ಸಹ ಮೆಚ್ಚುವನು. **—ಮಂಜುನಾಥ. ಕೆ. ದ್ವಿತೀಯ ಬಿ.ಫಾರ್ಮ. ಜೆ.ಎಸ್.ಎಸ್. ಫಾರ್ಮಸಿ ಕಾಲೇಜು, ಮೈಸೂರು.**

**"ವಿದ್ಯಾತುರಾಣಾಂ ನ ನಿದ್ರಾ ನ ಸುಖಮ್"** ಎಂಬಂತೆ ನಿಜವಾಗಿ ವಿದ್ಯೆಯಲ್ಲಿ ಆಸಕ್ತಿಯುಳ್ಳವನಿಗೆ ನಿದ್ರೆಯು ಬೇಡ, ಯಾವ ಸುಖವೂ ಬೇಡವಾಗಿರುತ್ತದೆ. ಅವನಿಗೆ ವಿದ್ಯೆಯೊಂದೆ ಸಾಕು. ನಮಗೆ ಒಂದು ಬೇಕೆಂದರೆ ಇನ್ನೊಂದನ್ನು ತ್ಯಜಿಸಲು ಸಿದ್ಧವಾಗಿರಬೇಕು. ಹಾಗೆ ವಿದ್ಯಾರ್ಥಿಯಾದವನು ತನಗೆ ವಿದ್ಯೆ ಬೇಕೆಂದರೆ ಏನನ್ನೂ ತ್ಯಜಿಸಲು ಸಿದ್ಧವಾಗಿರಬೇಕು. ಶುದ್ಧ ಮನಸ್ಸನ್ನು ಹೊಂದಿರಬೇಕು. ಅಹಂಕಾರ, ಸಿಟ್ಟು, ನಿರ್ಲಕ್ಷ್ಯ ಮುಂತಾದುವುಗಳನ್ನು ಬಿಡಬೇಕು. ತನಗೆ ಎಲ್ಲಾ ಗೊತ್ತಿರುವುದು ಎಂಬ ಅಹಂಕಾರ ಇರಬಾರದು. ತನಗೆ ಗೊತ್ತಿಲ್ಲದಿರುವ ವಿಷಯವನ್ನು ಯಾವ ಸಂಕೋಚ ಇಲ್ಲದೆ ಸಹಪಾಠಿಗಳಿಂದ ಕೇಳಿ ತಿಳಿದುಕೊಳ್ಳಲು ಹಿಂಜರಿಯಬಾರದು. ನಿಜವಾದ ಜ್ಞಾನದಾಹವುಳ್ಳವನೇ ಆದರ್ಶ ವಿದ್ಯಾರ್ಥಿ. **—ಭವ್ಯ ಹೆಚ್. ಎಸ್. ದ್ವಿತೀಯ ಪಿ.ಯು.ಸಿ., ಜೆ.ಎಸ್.ಎಸ್.ಮಹಿಳಾ ಕಾಲೇಜು, ಮೈಸೂರು.**

**ಆದರ್ಶ** ವಿದ್ಯಾರ್ಥಿಗೆ ಮೊದಲು ಬೇಕಾದುದು ಒಳ್ಳೆಯ ವ್ಯಕ್ತಿತ್ವ. ಓದಿನಲ್ಲಿ ಮಾತ್ರ ಮುಂದಿದ್ದು ವ್ಯಕ್ತಿತ್ವದಲ್ಲಿ ಹಾಗೂ ತನ್ನ ಆರೋಗ್ಯದ ವಿಷಯದಲ್ಲಿ ಹಿಂದುಳಿದಿದ್ದರೆ ಆತ ಆದರ್ಶ ವ್ಯಕ್ತಿ ಎಂದು ಕರೆಸಿಕೊಳ್ಳಲು ಯೋಗ್ಯನಾಗುವುದಿಲ್ಲ. ಆದರ್ಶ ವಿದ್ಯಾರ್ಥಿಯಾದವನಿಗೆ ವಿಷಯವನ್ನು ಸೂಕ್ಷ್ಮವಾಗಿ ಅರಿತುಕೊಳ್ಳುವ ಬುದ್ಧಿ ಇರಬೇಕು. ಬರಿಯ ಪಠ್ಯ ಪುಸ್ತಕದ ವಿಷಯವಲ್ಲದೆ ಬಾಹ್ಯ ವಿಷಯಗಳಲ್ಲೂ, ಒಳ್ಳೆಯ ಪುಸ್ತಕ ಓದುವ ಹವ್ಯಾಸಗಳಲ್ಲೂ ಆಸಕ್ತಿ ಬೆಳಸಿಕೊಂಡಿರಬೇಕು. ಆಗ ಮಾತ್ರ ಅವನು "ಆದರ್ಶ ವಿದ್ಯಾರ್ಥಿ" ಎಂದು ಕರೆಸಿಕೊಳ್ಳಲು ಯೋಗ್ಯವಾದವನಾಗಿರುತ್ತಾನೆ.

**—ರಣಜಿತ್ .ಐ.ಆರ್., ಪ್ರಥಮ ಪಿ.ಯು.ಸಿ., ಶಾರದಾ ವಿಲಾಸ ಕಾಲೇಜು, ಮೈಸೂರು**

ಆಸಕ್ತಿ, ಶ್ರದ್ಧೆ, ತಾಳ್ಮೆ ಚಿಂತನೆ, ಇವುಗಳು ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಇರಬೇಕಾದ ಮೌಲ್ಯಗಳು. ಕಲಿಕೆಯ ಹಂಬಲ, ವಿಶ್ವದ ರಹಸ್ಯವನ್ನು ಭೇದಿಸುವ ಛಲ, ಸನಾತನ ಧರ್ಮಗಳ ಅಧ್ಯಯನಗಳಲ್ಲಿ ತೊಡಗಿ ಪುಸ್ತಕಪ್ರೇಮಿಯಾಗಿ, ಅವುಗಳ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿರಬೇಕು.

ನಮ್ಮನ್ನು ನಾವು ಎಷ್ಟು ಪ್ರೀತಿಸುತ್ತೇವೊ ಅಷ್ಟೇ ಮಟ್ಟಿಗೆ ನೆರೆಹೊರೆಯವರನ್ನು ಪ್ರೀತಿಸಿ ನಮ್ಮ ಸುತ್ತ ಮುತ್ತಲ ಪರಿಸರದ ಬಗ್ಗೆ ಕಾಳಜಿ ವಹಿಸಿ, ಪರಿಸರಸಂರಕ್ಷಣೆಯ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಬೇಕು. ಸತತ ಅಧ್ಯಯನದಲ್ಲಿ ಆಸಕ್ತಿ ವಹಿಸಿ ಆತ್ಮಶೋಧನೆ ಮತ್ತು ಸ್ವವಿಮರ್ಶೆಗಳ ಮೂಲಕ ತಮ್ಮ ಪ್ರಗತಿಯನ್ನು ಅಳೆದುಕೊಳ್ಳಬೇಕು. ಈ ಮೇಲಿನ ಗುಣಗಳನ್ನು ಮೈಗೂಡಿಸಿಕೊಂಡಿರುವಂತಹನೇ ಆದರ್ಶ ವಿದ್ಯಾರ್ಥಿಯಾಗಿರುತ್ತಾನೆ.

—ಎಂ.ಜಿ. ರತ್ನಾಕರ, ಮಾನಸ ಗಂಗೋತ್ರಿ, ಮೈಸೂರು.

ಆದರ್ಶ ವಿದ್ಯಾರ್ಥಿ ಎನಿಸಿಕೊಳ್ಳಲು ಹಲವಾರು ಉತ್ತಮ ಅಂಶಗಳನ್ನು ಮೈಗೂಡಿಸಿಕೊಂಡಿರಬೇಕು.

೧. ಜೀವನದಲ್ಲಿ ಪ್ರಮುಖವಾಗಿ ಶಿಸ್ತನ್ನು ಪಾಲಿಸಬೇಕು.

೨. ಯಾವುದೇ ದೊಡ್ಡ ಅಥವಾ ಸಣ್ಣ ಕೆಲಸವನ್ನೇ ಆಗಲಿ ಶ್ರದ್ಧೆಯಿಂದ, ಮನುಷ್ಯನ ಮೆಚ್ಚುಗೆಗಾಗಿ ಮಾತ್ರ ಮಾಡದೆ, ದೇವರ ಮೆಚ್ಚುಗೆಯ ದೃಷ್ಟಿಯಿಂದ ಮಾಡಬೇಕು.

೩. ಬೆಳಗಿನ ಜಾವ ಬೇಗ ಏಳಬೇಕು ಮತ್ತು ಶುಚಿತ್ವವನ್ನು ಕಾಪಾಡಿಕೊಂಡು ಬರಬೇಕು.

೪. ತನ್ನ ಯಾವುದೇ ಕಾರ್ಯದಿಂದ ದೇಶಕ್ಕೆ ಅಥವಾ ಇತರರಿಗೆ ಯಾವುದೇ ಹಾನಿಯಾಗಬಾರದು ಎಂಬ ಮನೋಭಾವನೆ ಹೊಂದಿರಬೇಕು ಮತ್ತು ಪರೋಪಕಾರ ಬುದ್ಧಿಯುಳ್ಳವರಾಗಿರಬೇಕು.

೫. ಆದರ್ಶ ವಿದ್ಯಾರ್ಥಿಯಲ್ಲಿ "ಸಮಯಪ್ರಜ್ಞೆ" ಅತ್ಯಾವಶ್ಯಕವಾಗಿರಬೇಕು. ವ್ಯರ್ಥವಾಗಿ ಕಾಲಹರಣ ಮಾಡಬಾರದು.

೬. ಸಮಯ ಅತ್ಯಂತ ಅಮೂಲ್ಯವಾದಂತಹ ವಸ್ತು. ಅದನ್ನು ಜಾಗ್ರತೆಯಿಂದ ಉತ್ತಮ ಕೆಲಸಗಳಿಗೆ ವಿನಿಯೋಗಿಸಬೇಕು. ಯಾವುದೇ ಮಾತನ್ನಾಡುವಾಗ ಇತರರಿಗೆ ಮನನೋಯಿಸದಂತೆ ಎಚ್ಚರವಹಿಸಬೇಕು. ಕೆಟ್ಟದ್ದನ್ನು ನೋಡಬಾರದು, ಕೆಟ್ಟದ್ದನ್ನು ಕೇಳಬಾರದು, ಕೆಟ್ಟದ್ದನ್ನು ಆಡಬಾರದು.

೭. ಪ್ರತಿಯೊಬ್ಬ ವಿದ್ಯಾರ್ಥಿಯೂ ಮನೋಧೈರ್ಯವನ್ನು ಬೆಳೆಸಿಕೊಳ್ಳಬೇಕು. ಯಾವುದೇ ತಪ್ಪನ್ನು ಮಾಡಿದ್ದ ಪಕ್ಷದಲ್ಲಿ ಸ್ವತಃ ತಾನೇ ಒಪ್ಪಿಕೊಳ್ಳಬೇಕು.

೮. ನಮ್ರತೆ, ವಿನಯ, ಗೌರವ, ಹಿರಿಯರಲ್ಲಿ ಪೂಜ್ಯ ಭಾವನೆಯನ್ನು ಮೈಗೂಡಿಸಿಕೊಳ್ಳಬೇಕು.

೯. ಎಷ್ಟೇ ದೊಡ್ಡ ಅಧಿಕಾರವಿದ್ದರೂ ಮಾನವೀಯತೆಯನ್ನು ಕೈಬಿಡಬಾರದು.

ಮೇಲೆ ತಿಳಿಸಿದ ಎಲ್ಲಾ ಅಂಶಗಳು ಯಾವ ವಿದ್ಯಾರ್ಥಿಯಲ್ಲಿ ಕಂಡುಬರುತ್ತದೋ ಅವನೇ ನಿಜವಾದ "ಆದರ್ಶ ವಿದ್ಯಾರ್ಥಿ"

—ಶೀಲಾ. ಎಂ., ಬಿ.ಎ. ಮೈಸೂರು

**ಜ್ಞಾನವನ್ನು ಪಡೆಯುವುದಕ್ಕೆ ಅಧ್ಯಯನ ಮಾಡಬೇಕು. ಆದರೆ ವಿವೇಕಿಯಾಗಲು ಪರಿಶೀಲಿಸಬೇಕು.**

—ಮೆರಿಲಿನ್ ಸ್ಯಾವಂಟ್ (Marilyn Savant)

ಆದರ್ಶ ವಿದ್ಯಾರ್ಥಿಯು ಸಾಮಾಜಿಕವಾಗಿ ರಚನಾತ್ಮಕವಾಗಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕು. ಆದರ್ಶ ವಿದ್ಯಾರ್ಥಿಯೆಂದರೆ ಸಾಮಾನ್ಯವಾಗಿ ತನ್ನ ಬಹುಮುಖ ಪ್ರತಿಭೆಯಿಂದ ಮುಂದೆ ಬರುವವನು. ಅವನು ತನ್ನ ವಿದ್ಯಾರ್ಜನೆ, ಸಾಮಾಜಿಕ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು, ಸತ್ಯಸಂಧತೆ, ಗುರುಹಿರಿಯರಲ್ಲಿ ಗೌರವ, ತನ್ನ ಪ್ರತಿಭೆಯನ್ನು ರಚನಾತ್ಮಕವಾಗಿ ಬಳಸಿಕೊಳ್ಳುವುದು, ನೈತಿಕತೆಯನ್ನು ಅಳವಡಿಸಿಕೊಂಡು ಬದಲಾದ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಂಡು ಅದರಲ್ಲಿಯೆ ಉತ್ತಮವಾದ ಗುಣ-ಅಂಶಗಳನ್ನು ಅಳವಡಿಸಿಕೊಂಡು ಅದರಲ್ಲಿಯೇ ತನ್ನ ಬಹುಮುಖ ಪ್ರಗತಿ ಸಾಧಿಸುವನು. ಭಾರತೀಯ ಸಂಸ್ಕೃತಿಯ ಅನುಕರಣೆ, ನಾಗರಿಕತೆ, ಕ್ರೀಡೆಗಳಲ್ಲಿ ಪ್ರಗತಿ ಮುಂತಾದ ಅನೇಕ ನೀತಿ ನಿಯಮಗಳಲ್ಲಿ, ಕೆಲಸ ಕಾರ್ಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಭವಿಷ್ಯದಲ್ಲಿ ಆದರ್ಶವ್ಯಕ್ತಿಯಾಗಿ ಸಮಾಜದ ಜನರಿಗೆ ಮುಂದಿನ ವಿದ್ಯಾರ್ಥಿಗಳಿಗೆ ಮಾದರಿಯಾಗಿ ಬೆಳೆದು ಬರುವಂತಾಗಬೇಕು. ವಿದ್ಯಾರ್ಥಿ ಜೀವನದಲ್ಲಿ ಮಾಡಿದ ತಪ್ಪನ್ನು ಆಗಲೇ ತಿದ್ದಿಕೊಳ್ಳಬೇಕು. ಇಲ್ಲದಿದ್ದರೆ ಅದು ಬೆಳೆದು ಹೆಮ್ಮರವಾದೀತು! ನಿರ್ಧಾರ ಕೈಗೊಳ್ಳುವಾಗ ಅನೇಕ ಬಾರಿ ಯೋಚಿಸಿ, ದೃಢನಿರ್ಧಾರ ಕೈಗೊಳ್ಳಬೇಕು.

—ಸಿ.ಎಂ. ಮಂಜು. ದ್ವಿತೀಯ ಪಿ.ಯು.ಸಿ.
ಸರ್ಕಾರಿ ಪದವಿಪೂರ್ವ ಕಾಲೇಜು, ದೇವನೂರು,
ನಂಜನಗೂಡು ತಾಲ್ಲೂಕು.

1) *STUDENT* ಎಂಬ ಪದದ ಅಕ್ಷರಗಳು ಕ್ರಮವಾಗಿ *Studious* ಅಧ್ಯಯನಾಸಕ್ತ, *Thoughtful* - ಚಿಂತನಶೀಲ *Useful to Society* – ಸಮಾಜಹಿತ ಕಾರ್ಯಪ್ರವೃತ್ತ, *Dedicated, full of devotion, duty bound* – ತ್ಯಾಗಸೇವಾತುರ, ಭಕ್ತಿ ಶ್ರದ್ಧಾನ್ವಿತ, ಕರ್ತವ್ಯಪರ, *Enlightenment* – ಆತ್ಮಜ್ಞಾನಪಿಪಾಸು, *Nationally concerned* – ರಾಷ್ಟ್ರ ಪ್ರೇಮಪೂರಿತ, *Talented* – ಪ್ರತಿಭಾನ್ವಿತ ಎಂಬ ಈ ಎಲ್ಲ ಆದರ್ಶ ಗುಣಗಳನ್ನೇ ಪ್ರತಿಬಿಂಬಿಸುತ್ತವೆ.

ಜ್ಞಾನಾರ್ಜನೆಯೇ ವಿದ್ಯಾರ್ಥಿ ಜೀವನದ ಜೀವಾಳವಾದುದರಿಂದ ತೀವ್ರವಾದ ಜ್ಞಾನಾಸಕ್ತಿ ವಿದ್ಯಾರ್ಥಿಯಲ್ಲಿರಲೇಬೇಕು. "ನಾನು ತಿಳಿದುಕೊಳ್ಳಬೇಕು, ಚೆನ್ನಾಗಿ ತಿಳಿದುಕೊಳ್ಳಬೇಕು, ಇನ್ನಷ್ಟು ತಿಳಿದುಕೊಳ್ಳಬೇಕು, ಮತ್ತಷ್ಟು ತಿಳಿದುಕೊಳ್ಳಬೇಕು" ಎಂಬ ದೃಢ ಸಂಕಲ್ಪದ ತುಡಿತವೇ ಜ್ಞಾನಾರ್ಜನೆಯ ಹಾದಿಯಲ್ಲಿ ವಿದ್ಯಾರ್ಥಿಯನ್ನು ಮುನ್ನುಗ್ಗಿಸುವ ಅಂತಃಶಕ್ತಿ. ಈ ಆಸಕ್ತಿ ಇರುವಲ್ಲಿ ವಿದ್ಯಾರ್ಥಿಗೆ

> ವಿದ್ಯೆಯು ಮಾನವನಿಗೆ ಅಧಿಕ ಸೌಂದರ್ಯವನ್ನು ನೀಡುತ್ತದೆ ; ಅದು ಅವನಿಗೆ ಸುರಕ್ಷಿತವಾದ, ಗುಪ್ತವಾದ ಧನ; ವಿದ್ಯೆಯು ಅವನಿಗೆ ಭೋಗವನ್ನೂ ಯಶಸ್ಸನ್ನೂ ಸುಖವನ್ನೂ ನೀಡುತ್ತದೆ; ವಿದ್ಯೆ ಗುರುಗಳಿಗೆಲ್ಲ ಗುರು; ವಿದೇಶಯಾತ್ರೆಯಲ್ಲಿ ವಿದ್ಯೆಯು ಬಂಧುವಾಗಿರುತ್ತದೆ; ಪರದೇವತೆಯೂ ಅದೇ; ರಾಜರು ಪೂಜಿಸುವುದು ವಿದ್ಯೆಯನ್ನು, ಧನವನ್ನಲ್ಲ. ಆದ್ದರಿಂದ ವಿದ್ಯಾವಿಹೀನನು ಪಶುವಿಗೆ ಸಮಾನ.
>
> —ನೀತಿಶತಕ

ವರಪ್ರಾಯವಾದ ಇನ್ನೊಂದು ಗುಣ ಏಕಾಗ್ರತೆ ಅಂಕುರಿಸುತ್ತದೆ. ಈ ಏಕಾಗ್ರತೆಯೇ ವಿಚಾರದ ಆಳಕ್ಕೆ ನೆರವಾಗಿ ಸಾಗುವ ಮಹಾ ಗುಣ. ಈ ಆಸಕ್ತಿಯ ಜೊತೆ ಏಕಾಗ್ರತೆಯೂ ಸೇರಿದಾಗ ವಿದ್ಯಾರ್ಥಿಯಲ್ಲಿ "ನಾನಿದನ್ನು ಸಾಧಿಸಲೇಬೇಕು" ಎಂಬ ದೃಢ ನಿರ್ಧಾರ ಮೈದಳೆಯುತ್ತದೆ. ಆ ನಿರ್ಧಾರ ಬಲವಾದಷ್ಟೂ ವಿದ್ಯಾರ್ಥಿ ಯಲ್ಲಿ ಅಂತಃಶಕ್ತಿ ಉಕ್ಕುತ್ತದೆ. ಆತನಿಗೆ ಕಲಿಕೆಯಲ್ಲಿ ತಾನಾಗಿಯೇ ರುಚಿ ಹೆಚ್ಚುತ್ತದೆ. "ಅಪಾರ ಜ್ಞಾನಸಾಗರದೆದುರು ನಾನೇನೂ ಅಲ್ಲ" ಎಂಬ ವಿನಮ್ರಭಾವ ಅರಳುತ್ತದೆ.

ವಿದ್ಯಾರ್ಥಿಯಲ್ಲಿರಬೇಕಾದ ಅತಿ ಮುಖ್ಯ ಗುಣ ಶ್ರದ್ಧೆ. ಈ ಶ್ರದ್ಧೆ ಜ್ಞಾನ ಭಂಡಾರದ ಬಾಗಿಲನ್ನು ತೆರೆದೇ ಇರಿಸಿ ಮತ್ತಷ್ಟು, ಇನ್ನಷ್ಟು ತಿಳಿವನ್ನು ತೆರೆಗೈಯಿಂದ ಸ್ವಾಗತಿಸುವಂಥದು. ಲೆಕ್ಕದಲ್ಲಿ ನೂರು ಮಾರ್ಕು ಗಳಿಸಬೇಕೆಂದು ನಿರ್ಧರಿಸಿದವನಿಗೆ ಮೊದಲ ಪರೀಕ್ಷೆಯಲ್ಲಿ ೭೫ ಅಂಕಗಳು ಮಾತ್ರ ದೊರೆತಾಗ ಆತನಿಗೆ ಸಾಂತ್ವನ ನೀಡುವುದು ಈ ಅಚಲ ಶ್ರದ್ಧೆಯೇ. ಅದೇ ಆಗ ವಿವೇಕವನ್ನು ಬೆಳಗಿಸಿ "ಯಾಕೆ ಕಡಿಮೆ ಮಾರ್ಕು ದೊರೆಯಿತು? ಎಲ್ಲಿ ತಪ್ಪಾಗಿದೆ?" ಎಂಬ ಆತ್ಮವಿಮರ್ಶೆಯ ಗುಂಡಿಯನ್ನು ಒತ್ತುತ್ತದೆ. ಜೊತೆಜೊತೆಗೆ ಇನ್ನೊಮ್ಮೆ ಪ್ರಯತ್ನಿಸಿ ಸಾಧಿಸಲೇಬೇಕೆಂಬ ಛಲ ಗರಿಗೆದರುವಂತೆ ಮಾಡುತ್ತದೆ. ಗುರಿ ಸೇರುವ ದೃಢ ನಿರ್ಧಾರದ ಜೊತೆ ಈ ಛಲವೂ ಸೇರಿದಾಗ ಅದು ನಿಷ್ಠೆ ಆಗುತ್ತದೆ. ಈ ಏಕನಿಷ್ಠೆ ಸತತ ಪ್ರಯತ್ನದ ಜೊತೆಗಾರ. ಸೋಲರಿಯದೆ ತಿರುತಿರುಗಿ ಪ್ರಯತ್ನಿಸುತ್ತ ಸಾಗಿದಂತೆ ಯಶಸ್ಸಿನ ಶಿಖರ ಸಮೀಪಿಸಿಯೇ ಸಮೀಪಿಸುತ್ತದೆ. ಆದ್ದರಿಂದ ತೀವ್ರ ಜ್ಞಾನಾಸಕ್ತಿ, ದೃಢ ನಿರ್ಧಾರ, ನಲುಗದ ಏಕಾಗ್ರತೆ, ಅಚಲ ಶ್ರದ್ಧೆ, ಬಿಡದ ಛಲ, ಸತತ ಪ್ರಯತ್ನಶೀಲತೆಗಳೇ ವಿದ್ಯಾರ್ಥಿ ಜೀವನದ ಆದರ್ಶಗಳು, ವಿದ್ಯಾರ್ಥಿಯಲ್ಲಿರಬೇಕಾದ ಗುಣರತ್ನಗಳು.

**—ರೂಪಾ. ಎಂ.ಬಿ. ಮೂರನೇ ಸೆಮಿಸ್ಟರ್, ಬಿ.ಬಿ.ಎಂ., ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಕಾಲೇಜು, ಮೈಸೂರು.**

ಮಾನವ ಮತ್ತು ಮೃಗದ ನಡುವಿನ ವ್ಯತ್ಯಾಸ ಅಜಗಜಾಂತರ. ಆದರೆ ವಿದ್ಯಾರ್ಥಿಗಳು ಮೃಗಪಕ್ಷಿಗಳ ಕೆಲವು ಗುಣಗಳನ್ನು ಅನುಕರಿಸಬೇಕು. ನೋಡಿ, ಹೇಗೆ ತನ್ನ ಆಹಾರ ಭಕ್ಷಣೆಯಲ್ಲಿ ನಿಷ್ಠೆ ತೋರಿಸುತ್ತದೆ ಕಾಗೆ. ತನ್ನ ಆಹಾರವನ್ನು ಕುಕ್ಕಿ ಕುಕ್ಕಿ ಒಂದಿಷ್ಟೂ ಬಿಡದೆ ತಿಂದುಹಾಕುತ್ತದೆ. ಹಾಗೇ ವಿದ್ಯಾರ್ಥಿ ತನ್ನ ಅಭ್ಯಾಸದ ವಿಷಯದ ಮೂಲೆ ಮೂಲೆಯನ್ನು ಸ್ವಲ್ಪವೂ ಕೂಡ ಬಿಡದೆ ಅಧ್ಯಯಿಸಬೇಕು. ಕೊಕ್ಕರೆ, ತನ್ನ ಆಹಾರಕ್ಕೋಸ್ಕರ ಒಂಟಿ ಕಾಲಿನಲ್ಲಿ ಗಂಟೆಗಟ್ಟಲೆ ನಿಲ್ಲುತ್ತದೆ. ಇದು ಏಕಾಗ್ರತೆಯ ಸಂಕೇತ. ವಿದ್ಯಾರ್ಥಿ ತನ್ನ ಏಕಾಗ್ರತೆಯ ವಿಷಯದಲ್ಲಿ ಕೊಕ್ಕರೆಯನ್ನು ಅನು ಕರಿಸಬೇಕು. ನಾಯಿಯನ್ನು ಗಮನಿಸಿ, ನಿದ್ದೆಯಲ್ಲಿ ಕೂಡ ಅದು ಎಷ್ಟು ಪರಿಜ್ಞಾನವನ್ನು ಪ್ರದರ್ಶಿಸುತ್ತದೆ. ಹಾಗೆ ವಿದ್ಯಾರ್ಥಿ ಯಾದವನು ಜಾಗ್ರತ ಮನಸ್ಸಿನವನಾಗಿರಬೇಕು. ತನ್ನ ನಿದ್ರೆಯನ್ನು ಆದಷ್ಟು ಸೀಮಿತಗೊಳಿಸಿಕೊಳ್ಳುವುದರ ಮೂಲಕ ತನ್ನ ವಿಷಯದಲ್ಲಿ ನಿರತನಾಗಿರಬೇಕು.

**—ಹರ್ಷ.ಡಿ.ಕೆ. ಅಂತಿಮ ಬಿ.ಎಸ್ಸಿ. ಯುವರಾಜ ಕಾಲೇಜು, ಮೈಸೂರು.**

ಪ್ರತಿಯೊಬ್ಬ ವಿದ್ಯಾರ್ಥಿಯು ಒಬ್ಬ ಆದರ್ಶ ತಪಸ್ವಿ, ವಿದ್ಯಾ ಸಾಧನೆಗಾಗಿ ಶ್ರಮಿಸುವವನೇ ಆದರ್ಶ ವಿದ್ಯಾರ್ಥಿ. ಕಲಿತ ವಿದ್ಯೆಯ ತತ್ವಗಳನ್ನು ಜೀವನದಲ್ಲಿ ರೂಢಿಸಿಕೊಂಡು ಬಾಳುವವನೆ ಆದರ್ಶ ವಿದ್ಯಾರ್ಥಿ. ಆದರ್ಶ ವಿದ್ಯಾರ್ಥಿಯು ಎಂದೂ ಯಾರಿಗೂ ಹೊರೆಯಾಗಿರುವುದಿಲ್ಲ. ಎಲ್ಲರಿಂದಲೂ ಮೆಚ್ಚುಗೆ ಪಡೆದವನಾಗಿರುತ್ತಾನೆ. ಸೋಮಾರಿಯಾಗದೆ ಅಂದಂದಿನ ಕೆಲಸವನ್ನು ಅಂದಂದೇ ಮಾಡುತ್ತಾನೆ. ಎಂದಿಗೂ ಸುಳ್ಳಾಡುವುದಿಲ್ಲ. ದೇವರಲ್ಲಿ ಭಕ್ತಿಭಾವ ಇರುತ್ತದೆ. ವಿದ್ಯೆಯನ್ನು ಕೇವಲ ಪರೀಕ್ಷೆ ಬರೆಯುವುದಕ್ಕಾಗಲಿ, ಅಥವಾ ಹಣ ಗಳಿಸುವುದಕ್ಕಾಗಿ ಕಲಿಯದೇ ಜ್ಞಾನಾರ್ಜನೆಗಾಗಿ ಕಲಿಯುತ್ತಾನೆ. ಪರೀಕ್ಷೆಗಳಲ್ಲಿ ನಕಲು ಮಾಡದೆ ಸ್ವ-ಬುದ್ಧಿಯಿಂದ ಪರೀಕ್ಷೆ ಬರೆದು ಉತ್ತೀರ್ಣನಾಗುತ್ತಾನೆ. ಆದರ್ಶ ವಿದ್ಯಾರ್ಥಿ ಎಲ್ಲ ವಿಷಯದಲ್ಲಿಯೂ ಆದರ್ಶನಾಗಿರಬೇಕು. ಅಂಗವಿಕಲರು, ರೋಗಿಗಳನ್ನು ಕಂಡಾಗ ಕೈಲಾದ ಸಹಾಯ ಮಾಡುತ್ತಾನೆ. ಬಡವರಲ್ಲಿ, ನೊಂದವರಲ್ಲಿ ಅನುಕಂಪವಿರುತ್ತದೆ. ಇದು ಆದರ್ಶ ವಿದ್ಯಾರ್ಥಿಯ ಪ್ರಮುಖ ಗುಣಗಳು.**—ಭಾಗ್ಯಲಕ್ಷ್ಮಿ. ಎಚ್., ಅಂತಿಮ ಬಿ.ಎಸ್ಸಿ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

## ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ

ಸ್ವಾಮಿ ವಿವೇಕಾನಂದರು ಸಿಡಿಸಿದ ತುಫಾಕಿಯ ಕಿಡಿಗಳಂತಹ ಈ ಮೇಲಿನ ಮಾತು ಇಂದಲ್ಲ, ನಾಳೆಯಲ್ಲ, ಎಂದೆಂದಿಗೂ ಅಮರವಾಗಿರುವುದು. ವಿದ್ಯಾರ್ಥಿಗಳಿಗೆ, ನಾಗರಿಕರಿಗೆ ಈ ಮಾತು ವೇದ ವಾಕ್ಯ. ಇದನ್ನು ಪಾಲಿಸಿದರೆ ತಾವು ನಿರ್ಧರಿಸಿದ ಗುರಿ ತಲುಪಬಹುದು. ಆದರ್ಶ ವಿದ್ಯಾರ್ಥಿಗಳು ಇದನ್ನು ರೂಢಿಸಿಕೊಳ್ಳಬೇಕು.

ವಿದ್ಯಾರ್ಥಿ ಮುಂದಿನ ಭವಿಷ್ಯ ರೂಪಿಸಿಕೊಳ್ಳುವ ಕೀಲಿ ಕೈ ಅವನಲ್ಲಿರುತ್ತದೆ. ಆದರ್ಶ ವಿದ್ಯಾರ್ಥಿಯನ್ನು ಪರಿಸರ, ಸಂಸ್ಕೃತಿ, ಧರ್ಮ, ನೈತಿಕ ನಿಯಮ, ಶಿಕ್ಷಣ ಮುಂತಾದ ಅಂಶಗಳು ರೂಪಿಸುತ್ತವೆ. ಆದರ್ಶ ವಿದ್ಯಾರ್ಥಿಯಾಗಲು ಅವಿರತ ಪರಿಶ್ರಮಿಸಬೇಕು. ಸದ್ಗ್ರಂಥಗಳ ಆದರ್ಶ ಪುರುಷರ ವಿಚಾರಗಳನ್ನು ಜೀವನದಲ್ಲಿ